ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.
ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 11-04-2016

# ಪತ್ರಿಕಾ ಪ್ರಕಟಣೆ

## ದೆಹಲಿಯಲ್ಲಿ ಕನ್ನಡ ಚಲನಚಿತ್ರೋತ್ಸವ

ಬೆಂಗಳೂರು, ಏಪ್ರಿಲ್ 11 (ಕರ್ನಾಟಕ ವಾರ್ತೆ) :

ಕರ್ನಾಟಕ ಚಲನಚಿತ್ರ ಅಕಾಡೆಮಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಚಲನಚಿತ್ರೋತ್ಸವ ನಿರ್ದೇಶನಾಲಯ, ವಾರ್ತಾ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ ಇವರುಗಳ ಸಂಯುಕ್ತ ಆಶ್ರಯದಲ್ಲಿ ನವದೆಹಲಿಯ ಸಿರಿಫೋರ್ಟ್ ಆಡಿಟೋರಿಯಂ -2 ರಲ್ಲಿ ಏಪ್ರಿಲ್ 16 ರಿಂದ 18 ರವರೆಗೆ **ಕನ್ನಡ ಚಲನಚಿತ್ರೋತ್ಸವ**ವನ್ನು ಹಮ್ಮಿಕೊಳ್ಳಲಾಗಿದೆ.

ದಿನಾಂಕ 16-4-2016 ರಂದು ಬೆಳಿಗ್ಗೆ 10.15 ಗಂಟೆಗೆ ನವದೆಹಲಿಯ ಆಗಸ್ಟ್ ಕ್ರಾಂತಿ ಮಾರ್ಗ್ ಬಳಿಯಿರುವ ಸಿರಿಫೋರ್ಟ್ ಆಡಿಟೋರಿಯಂ-2 ರಲ್ಲಿ ಹಮ್ಮಿಕೊಂಡಿರುವ ಉದ್ಘಾಟನಾ ಕಾರ್ಯಕ್ರಮದಲ್ಲಿ ನವದೆಹಲಿಯ ಕರ್ನಾಟಕ ಭವನದ ಸ್ಥಾನಿಕ ಆಯುಕ್ತರಾದ ಶ್ರೀ ಅತುಲ್ ಕುಮಾರ್ ತಿವಾರಿ, ಭಾರತ ಸರ್ಕಾರದ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಚಿತ್ರೋತ್ಸವ ನಿರ್ದೇಶನಾಲಯದ ನಿರ್ದೇಶಕ ಶ್ರೀ ಸಿ.ಸೆಂಥಿಲ್ ರಾಜನ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರಾದ ಶ್ರೀ ಎನ್.ಆರ್.ವಿಶುಕುಮಾರ್, ಕರ್ನಾಟಕ ಭವನದ ಉಪಸ್ಥಾನಿಕ ಆಯುಕ್ತರಾದ ಶ್ರೀ ಅನೀಸ್ .ಕೆ.ಜಾಯ್, ರಾಷ್ಟ್ರ ಪ್ರಶಸ್ತಿ ವಿಜೇತ ಚಲನಚಿತ್ರ ನಟ ಶ್ರೀ ಸಂಚಾರಿ ವಿಜಯ್, ನವದೆಹಲಿ ವಿಜಯಕರ್ನಾಟಕದ ಹಿರಿಯ ಸಹಾಯಕ ಸಂಪಾದಕ ಶ್ರೀ ಡಿ.ಉಮಾಪತಿ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ್ ಭಾಗವಹಿಸಲಿದ್ದಾರೆ. ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಶ್ರೀ ಎಸ್.ವಿ.ರಾಜೇಂದ್ರಸಿಂಗ್ ಬಾಬು ಅಧ್ಯಕ್ಷತೆ ವಹಿಸಲಿದ್ದಾರೆ.

ಉತ್ಸವದ ಉದ್ಘಾಟನಾ ಚಿತ್ರವಾಗಿ ರಾಮ್‌ರೆಡ್ಡಿ ನಿರ್ದೇಶನದ 'ತಿಥಿ' ಪ್ರದರ್ಶನಗೊಳ್ಳಲಿದೆ. ಉತ್ಸವದ 16, 17 ಮತ್ತು 18 ನೇ ಏಪ್ರಿಲ್ 2016 ಮೂರೂ ದಿನ ತಲಾ 3 ಚಿತ್ರ ಪ್ರದರ್ಶನಗಳಿರುತ್ತವೆ. ಪ್ರದರ್ಶನ ಸಮಯ ಕ್ರಮವಾಗಿ 11.00 ಗಂಟೆ – ಮಧ್ಯಾಹ್ನ 2.30 ಹಾಗೂ 6.30 ಗಂಟೆ. 16 ರಂದು **ತಿಥಿ, ನಾನು ಅವನಲ್ಲ ಅವಳು** ಮತ್ತು **ರಂಗಿತರಂಗ** ಚಿತ್ರಗಳು, 17 ರಂದು **ಹರಿವು, ವಿದಾಯ,** ಮತ್ತು

**ಕೃಷ್ಣಲೀಲಾ** ಚಿತ್ರಗಳು 18 ರಂದು **ಮಿ.ಅಂಡ್ ಮಿಸೆಸ್ ರಾಮಾಚಾರಿ, ಫಸ್ಟ್ ರ್‍ಯಾಂಕ್ ರಾಜು** ಮತ್ತು ಕೊನೆಯದಾಗಿ **ಶಿವಲಿಂಗ** ಚಿತ್ರಗಳು ಪ್ರದರ್ಶನಗೊಳ್ಳಲಿವೆ.

ಹೆಚ್‌ಬಿಡಿ

# ಒರಿಸ್ಸಾ ಕಾರ್ಮಿಕ ಸಚಿವರೊಂದಿಗೆ ರಾಜ್ಯದ ಕಾರ್ಮಿಕ ಸಚಿವ ಪರಮೇಶ್ವರ ನಾಯಕ್ ಚರ್ಚೆ

ಬೆಂಗಳೂರು, ಏಪ್ರಿಲ್ 11 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ವಾಸಿಸುತ್ತಿರುವ ಒರಿಸ್ಸಾ ರಾಜ್ಯದ ವಲಸೆ ಕಾರ್ಮಿಕರ ಸಮಸ್ಯೆ ಹಾಗೂ ಕಲ್ಯಾಣ ಸೌಲಭ್ಯ ವಿಸ್ತರಿಸುವ ಸಂಬಂಧ ಒರಿಸ್ಸಾ ರಾಜ್ಯದ ಕಾರ್ಮಿಕ, ಇ.ಎಸ್.ಐ. ಉಕ್ಕು ಮತ್ತು ಗಣಿ ಸಚಿವ ಪ್ರಪುಲ್ಲ ಕುಮಾರ್ ಮಲ್ಲಿಕ್ ಅವರು ರಾಜ್ಯದ ಕಾರ್ಮಿಕ ರಾಜ್ಯ ಸಚಿವ ಪಿ. ಟಿ. ಪರಮೇಶ್ವರ್ ನಾಯಕ್ ಅವರೊಂದಿಗೆ ವಿಧಾನಸೌಧದಲ್ಲಿ ಸಚಿವರ ಕಚೇರಿಯಲ್ಲಿ ಇಂದು ಚರ್ಚೆ ನಡೆಸಿದರು.

ರಾಜ್ಯಕ್ಕೆ ಒಲಸೆ ಬಂದಿರುವ ಐದು ಲಕ್ಷಕ್ಕೂ ಹೆಚ್ಚು ಒರಿಸ್ಸಾ ಕಾರ್ಮಿಕರು ವಿವಿಧೆಡೆ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ತಾತ್ಕಾಲಿಕ ವಸತಿ ಮತ್ತು ಮಕ್ಕಳಿಗೆ ವಿದ್ಯಾಭ್ಯಾಸ ಕಲ್ಪಿಸುವ ಸಂಬಂಧ ಉಭಯ ರಾಜ್ಯಗಳ ಕಾರ್ಮಿಕ ಸಚಿವರು ಒಡಂಬಡಿಕೆಗೆ ಪೂರ್ವವಾಗಿ ಇಂದು ಮಾತುಕತೆ ನಡೆಸಿದರು.

ಮುಂದಿನ ಜೂನ್ ತಿಂಗಳಲ್ಲಿ ರಾಜ್ಯದ ಕಾರ್ಮಿಕ ಸಚಿವ ಪಿ.ಟಿ. ಪರಮೇಶ್ವರ ನಾಯಕ್ ಅವರು ಒರಿಸ್ಸಾಗೆ ಭೇಟಿ ನೀಡಿ ಒಡಂಬಡಿಕೆಗೆ ಸಹಿ ಹಾಕಲಿದ್ದಾರೆ.

ಒರಿಸ್ಸಾದ ಸುಮಾರು ಹನ್ನೊಂದು ಸಾವಿರಕ್ಕೂ ಹೆಚ್ಚು ಕಾರ್ಮಿಕರನ್ನು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರೆಂದು ಗುರುತಿಸಿ ಈಗಾಗಲೇ ನೊಂದಣಿ ಮಾಡಿದ್ದು ಅವರಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಇಂದು ನಡೆದ ಚರ್ಚೆಯಲ್ಲಿ ಕಾರ್ಮಿಕ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಸಂಜೀವಕುಮಾರ್ ಸೇರಿದಂತೆ ಹಿರಿಯ ಅಧಿಕಾರಿಗಳು, ಚರ್ಚೆ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮಮತ:ಕೆಪಿಪಿ:ಜಿಪಿಆರ್

# ಬೇಕರಿ ಮತ್ತು ಮೌಲ್ಯವರ್ಧಿತ ಪದಾರ್ಥಗಳ ಕುರಿತ ಬೇಸಿಗೆ ತರಬೇತಿ ಶಿಬಿರ

ಬೆಂಗಳೂರು, ಏಪ್ರಿಲ್ 11 (ಕರ್ನಾಟಕ ವಾರ್ತೆ)

ನಗರದ ಹೆಬ್ಬಾಳದಲ್ಲಿರುವ ಕೃಷಿ ವಿಶ್ವವಿದ್ಯಾನಿಲಯದ ಬೇಕರಿ ತರಬೇತಿ ಕೇಂದ್ರವು ಬೇಕರಿ ಮತ್ತು ಮೌಲ್ಯವರ್ಧಿತ ಪದಾರ್ಥಗಳ ಕುರಿತ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಹಮ್ಮಿಕೊಂಡಿದೆ.

ಗೃಹ ಮಟ್ಟದ ಬೇಕರಿ, ಶಾಲಾ ಮಕ್ಕಳಿಗೆ ಬೇಕರಿ ತರಬೇತಿ (8 ರಿಂದ 16 ವರ್ಷದೊಳಗಿನವರು), ವಿಶೇಷ ಕೇಕ್‌ಗಳು, ಮೊಟ್ಟೆ ರಹಿತ ಬೇಕರಿ ಪದಾರ್ಥಗಳು, ರಾಗಿ ಉತ್ಪನ್ನಗಳು, ಹಣ್ಣು ತರಕಾರಿಗಳ ಸಂಸ್ಕರಣೆ, ನೆಲ್ಲಿಕಾಯಿ ಉತ್ಪನ್ನಗಳು, ಚಾಕಲೇಟ್ ತಯಾರಿಕೆ, ಕಿರು ಧಾನ್ಯಗಳ ಮೌಲ್ಯವರ್ಧನೆ, ನೈಸರ್ಗಿಕ ಸಕ್ಕರೆ–ಸ್ಟಿವಿಯಾ ಪದಾರ್ಥಗಳು, ಸೋಯಾ ಅವರೆ ಪದಾರ್ಥಗಳು ಹಾಗೂ ಉಲ್ಲಾಸಕರ ಜ್ಯೂಸ್ ತಯಾರಿಕೆಗಳ ಕುರಿತು ಈ ತರಬೇತಿಯಲ್ಲಿ ತಿಳಿಸಿಕೊಡಲಾಗುವುದು.

ಆಸಕ್ತರು ಹೆಚ್ಚಿನ ವಿವರಗಳಿಗೆ ಸಂಯೋಜಕರು, ಬೇಕರಿ ತರಬೇತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು – 560 024, ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ – 080 – 23513370 ಮೂಲಕ ಸಂಪರ್ಕಿಸಬಹುದಾಗಿದೆ.

ಮಮತ:ಜಿಪಿಆರ್

## ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ಏಪ್ರಿಲ್ 11 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕ ಸೇವಾ ಆಯೋಗವು ತೋಟಗಾರಿಕೆ ಇಲಾಖೆಯಲ್ಲಿನ ಸಹಾಯಕ ತೋಟಗಾರಿಕೆ ಅಧಿಕಾರಿಗಳ ಬ್ಯಾಕ್‌ಲಾಗ್ ಹುದ್ದೆಗಳ ಆಯ್ಕೆಪಟ್ಟಿಯನ್ನು ಏಪ್ರಿಲ್ 4 ರಂದು ಆಯೋಗದ ಅಂತರ್ಜಾಲ "http://kpsc.kar.nic.in/result" ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಆಕ್ಷೇಪಣೆಗಳನ್ನು ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಈ ಆಯ್ಕೆಪಟ್ಟಿಯನ್ನು ಪ್ರಕಟಿಸಿದ 15 ದಿನಗಳೊಳಗೆ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು – 1 ಇವರಿಗೆ ಸಲ್ಲಿಸಬಹುದಾಗಿದೆ.

ಮಮತ:ಜಿಪಿಆರ್

## ಇಲಾಖಾ ಪರೀಕ್ಷೆ ವೇಳಾಪಟ್ಟಿ ಪ್ರಕಟ

ಬೆಂಗಳೂರು, ಏಪ್ರಿಲ್ 11 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕ ಸೇವಾ ಆಯೋಗವು 2016 ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಗಳನ್ನು ಏಪ್ರಿಲ್ 16 ರಿಂದ 18 ರವರೆಗೆ ರಾಜ್ಯ ಎಲ್ಲಾ ಜಿಲ್ಲಾ ಕೇಂದ್ರಗಳು ಮತ್ತು ನವದೆಹಲಿ ಕೇಂದ್ರ, ಏಪ್ರಿಲ್ 20 ರಿಂದ 28 ರವರೆಗೆ ಬೆಂಗಳೂರು, ಬೆಳಗಾವಿ, ವಿಜಯಪುರ, ಗದಗ, ಕಲಬುರಗಿ, ಮಂಗಳೂರು, ಮೈಸೂರು, ರಾಯಚೂರು, ಶಿವಮೊಗ್ಗ ಕೇಂದ್ರಗಳು ಹಾಗೂ ನವದೆಹಲಿ ಕೇಂದ್ರ ಹಾಗೂ ಏಪ್ರಿಲ್ 29 ರಿಂದ ಮೇ 5 ರವರೆಗೆ ಬೆಂಗಳೂರು ಕೇಂದ್ರದಲ್ಲಿ ನಡೆಸಲಿದೆ.

ಈ ಪರೀಕ್ಷೆಗಳಿಗೆ ಈಗಾಗಲೇ ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ಮತ್ತು ಅನರ್ಹ ಅಭ್ಯರ್ಥಿಗಳ ತಿರಸ್ಕೃತ ಪಟ್ಟಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ. ಅಭ್ಯರ್ಥಿಗಳು ಏಪ್ರಿಲ್ 7 ರಿಂದ ಆಯೋಗದ ವೆಬ್‌ಸೈಟ್ "http://kpsc.kar.nic.in" ನ Home Page ನಲ್ಲಿ

**"CLICK HERE TO DOWNLOAD ADMISSION TICKET FOR DEPARTMENTAL EXAMINATION 2016-I SESSION"** ಎನ್ನುವ **LINK** ಅನ್ನು ಕ್ಲಿಕ್ ಮಾಡಿ ತಮ್ಮ ಅರ್ಜಿ ಸಂಖ್ಯೆಗಳನ್ನು ನಮೂದಿಸಿ ಪ್ರವೇಶ ಪತ್ರಗಳನ್ನು ಮತ್ತು "ಅಭ್ಯರ್ಥಿಗಳಿಗೆ ಸೂಚನೆಗಳು" ಪ್ರತಿಯನ್ನು ಕಡ್ಡಾಯವಾಗಿ ಡೌನ್‌ಲೋಡ್" ಮಾಡಿಕೊಳ್ಳುವಂತೆ ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಮಮತ:ಜಿಪಿಆರ್